# ಸುಖಾಂತ್ಯ

■ ವಸುಂಧರಾ ಕದಲೂರು



ಮಾಧವನೊಡನೆ ಲಿವ್‌ಇನ್‌ಗೆ ಒಪ್ಪಲು ಕಾರಣ ನನ್ನ ಅಪರಿಮಿತ ಆತ್ಮವಿಶ್ವಾಸವೇ ಹೊರತು ಬೇರೇನಲ್ಲ.

ಅದು ನನ್ನ ಪರಮ ಮೂರ್ಖತನ ಎಂದು ನಾನೀಗ ಒಪ್ಪಿಕೊಳ್ಳುತ್ತೇನೆ. ಆತನನ್ನು ಒಂದಲ್ಲಾ ಒಂದು ದಿನ ಬದಲಾಯಿಸಿ ಬಿಡುವೆ ಎಂಬ ಹುಂಬತನದಲ್ಲಿ ಅಲ್ಲವೇ ನಾನು ಒಪ್ಪಿದ್ದು?

'ಹೀಗೇಕೆ ಮಾಡಿದೆ ನೀನು?' ಎಂದು ಕೇಳಲು ನನಗಾದರೂ ಯಾರಿದ್ದರು ಹೇಳಿ! ಲಿವ್‌ಇನ್‌ಗೆ ಒಪ್ಪಿದೆನೆಂದ ಮಾತ್ರಕ್ಕೆ ನನಗೆ ಮದುವೆ ಆಗಬಾರದು ಎಂದೇನಿರಲಿಲ್ಲ. ಆಗ ಕೆಲವು ಆಫರ್‌ಗಳೂ ಬಂದಿದ್ದವು. ಸರಿಯಾಗಿ ಮುಂದುವರೆದಿದ್ದರೆ, ಎಲ್ಲರಂತೆ ನಾನೂ ಆರಾಮಿರುತ್ತಿದ್ದೆನೇನೋ...

'ಹಾಗಾದರೆ ನೀನು ಈಗ ಚೆನ್ನಾಗಿಲ್ಲವೇ?' ಎಂಬ ಪ್ರಶ್ನೆಗೆ, ನನ್ನ ಮೌನವೇ ಉತ್ತರ.

ಮೌನವೇ ಎಲ್ಲಕ್ಕೂ ಉತ್ತರವಾಗಲಾರದು.

ಆದರೆ

ಹೀಗೆ ರಾಗ ಎಳೆದಾಗಲೆಲ್ಲಾ 'ಆದರೆ ಏನು?' ಎಂದು ನನ್ನ ವ್ಯಗ್ರಗೊಂಡ ಮನಸ್ಸು ನನಗೇ ಮರು ಪ್ರಶ್ನಿಸುತ್ತೆ. ನಿನ್ನದು ಕ್ಷಣ ಚಿತ್ತ ಕ್ಷಣ ಪಿತ್ತ ಎಂದು ರೇಗಿಸುತ್ತೆ.

'ನಿನಗೆ ಮಾಧವ ಬೇಡ ರಶ್ಮಿ, ಆತ ಸೂಟ್ ಆಗಲ್ಲ' ಅಂತ ಸಹನಾ ಕ್ವಚ್ಚಿತ್ತಾಗಿ ಹೇಳಿಯೂ ಸಹ, 'ಏಕೆ ಆಗಲ್ಲಾ! ಹೇಳೇ?' ಎಂದು ಜೋರು ಬಾಯಿ ತೆಗೆದಿದ್ದ ನನಗೆ ಆಗ ಆಕೆಯ ಬಾಯಿ ಮುಚ್ಚಿಸುವುದು ಸುಲಭವಾಗಿತ್ತು. ಅದೊಂದು ಬಾರಿಯಲ್ಲ, ಅಂತಹ ಪ್ರಸಂಗ ಉದ್ಭವಿಸುತ್ತಿದ್ದ ಹಲವು ಬಾರಿ ಸಹನಾ, ಪ್ರವೀಣ್, ಜೇಮ್ಸ್, ರುಬೀನಾ ಇವರೆಲ್ಲಾ 'ಮಾಧವ ಬೇಡ' ಎಂಬ ಮಾತನ್ನು ಮಂತ್ರ ಜಪಿಸಿದಂತೆ ಜಪಿಸಿ ಹೇಳುತ್ತಿದ್ದರು.

ನಾನು ಮಾತ್ರ ಜಪ್ಪೆಂದಿರಲಿಲ್ಲ.

ನೀವು ಮಾಧವನನ್ನು ಆತನ ಹರೆಯದಲ್ಲಿ ನಿಮ್ಮ ಯೌವನದ ಕಣ್ಣುಗಳಿಂದ ನೋಡಿದ್ದರೆ, 'ಇವರೆಲ್ಲಾ ಹೊಟ್ಟೆ ಕಿಚ್ಚಿನಿಂದಾನೇ ಹೇಳ್ತಿರೋದು' ಅಂತಾನೇ ನಿರ್ಣಯಿಸುತ್ತಿದ್ರಿ. ನಾನಾಗ ನಿರ್ಧರಿಸಿದ ಹಾಗೆ.

'ನೋ ಡೌಟ್'

ಹರೆಯದ ಹುಮ್ಮಸ್ಸಿನಲ್ಲಿ ನಾನು ಮಾಡಿದ್ದೇ ಸರಿಯಾಗಿತ್ತು. ಮಾಧವನೊಡನೆ ಮುಂದುವರೆದೆ. ಆ ತಿರುಗಾಟದ ದಿನಗಳು, ಮೈ ಮುರಿಯುವಂತಹ ಅಪ್ಪುಗೆಯ ಸರಸಗಳು, ಅಹೋರಾತ್ರಿಯ ಸಂಗಮಗಳು...

ಮಾಧವಾ ಮಾಧವಾ... ನನ್ನೆದೆಯ ಮಿಡಿತದಲ್ಲಿ ಬರೀ ಇದೇ ಅನುರಣನೆ.. ಆತ ಹತ್ತಿರಿದ್ದಾಗ, ಇಲ್ಲದಿದ್ದಾಗ...

ರಾಧೆಯೂ ಹೀಗೆ ಕೃಷ್ಣನಿಗಾಗಿ ಕಾದಿರಲಾರಳು..!

ಹುಚ್ಚೀ.. ಹುಚ್ಚೀ... ಈಗ ಒಳಮನಸ್ಸು ಜರೆಯುತ್ತಿದೆ, ತಿವಿಯುತ್ತಿದೆ.

ಆಗ?

ನಾನೋ ಲೋಕ ವೈರಾಗ್ಯ ಹೊಂದಿದವಳಂತೆ, ಒಲವಿನ ದೀಕ್ಷೆ ಪಡೆದವಳಂತೆ.. ಉತ್ಕಟೋತ್ಕಟ ಪ್ರೇಮೋನ್ಮಾದದಲಿ ಮಾಧವನನ್ನು ಪ್ರೇಮಿಸಿ ಕಾಮಿಸಿದೆ.

ಆತನೂ...?

ಹೌದೂ ಮಾಧವನೂ ನನ್ನನ್ನು ರಮಿಸಿದವನೇ. ನನ್ನ ಒಲವಿನಲಿ ಆತ ಉಬ್ಬುತ್ತಿದ್ದ. ಹೊಗಳಿಕೆಗೆ